ಶ್ರೀಹನುಮಾನ್ ಚಾಲೀಸಾ

CC-O. In Public Domain. Digitized by eGangotri

(ಅರ್ಥ, ಅಷ್ಟೋತ್ತರ ಶತನಾಮಾವಳಿ ಸಹಿತ)

Sri Vidyabharathi Book Centre, Sringeri

ಶ್ರೀ ಮಹಾಲಸಾ ನಾರಾಯಣೀ ದೇವಿ ಕ್ಷೇತ್ರ, ಹಲಿಪಿಂಡಿಗೆ, ಉಡುಪಿ

CC-O. In Public Domain. Digitized by eGangotri

Sri Vidyabharathi Book Centre, Sringeri
ಶ್ರೀ ಮಹಾಲಸಾ ನಾರಾಯಣೀ ದೇವಿ ಕ್ಷೇತ್ರ, ಹರಿಖಂಡಿಗೆ, ಉಡುಪಿ

CC-O. In Public Domain. Digitized by eGangotri

ಶ್ರೀಹನುಮಾನ್ ಚಾಲೀಸಾ

(ಅರ್ಥ, ಅಷ್ಟೋತ್ತರ ಶತನಾಮಾವಳಿ ಸಹಿತ)

SHRI MAHAALASAA NAARAAYANI DEVI KSHETRA, HARIKHANDIGE

41 SHIROOR, HARIKHANDIGE - 576 124, UDUPI DIST.

Cell: 97394 86200/8970414801/9886818366 E-mail: sureshjpai@gmail.com

Website: http://harikhandige.mahalasa.org facebook.com/MyMahalasa

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಶ್ರೀ ಹನುಮತೇ ನಮಃ ॥

ಅಂಜನಾನಂದನಂ ವೀರಂ ಜಾನಕೀ ಶೋಕನಾಶನಂ।
ಕಪೀಶಮಕ್ಷಹಂತಾರಂ ವಂದೇ ಲಂಕಾ ಭಯಂ ಕರಂ॥

॥ ದೋಹಾ ॥

ಶ್ರೀಗುರು ಚರಣ ಸರೋಜ ರಜ, ನಿಜಮನ ಮುಕುರು ಸುಧಾರಿ।
ಬರನ ಉಂ ರಘುಬರ ಬಿಮಲ ಜಸು ಜೋ ದಾಯಕು ಫಲ ಚಾರಿ॥

ಶ್ರೀ ಗುರು ಚರಣಗಳಲ್ಲಿಯ ಪವಿತ್ರ ಧೂಳಿ ಕಣಗಳಿಂದ ಮನಸ್ಸೆಂಬ ಕನ್ನಡಿಯನ್ನು ನಾನು ಸ್ವಚ್ಛಗೊಳಿಸಿ ಚತುರ್ವಿಧ ಪರಮ ಪುರುಷಾರ್ಥಗಳನ್ನು (ಧರ್ಮ, ಅರ್ಥ, ಕಾಮ, ಮೋಕ್ಷ) ಅನುಗ್ರಹಿಸುವ ರಘು ಶ್ರೇಷ್ಠ ಶ್ರೀರಾಮ ಚಂದ್ರನ ನಿರ್ಮಲ ಯಶಸ್ಸಿನ ಗುಣಗಾನವನ್ನು ಮಾಡುವೆನು.

ಬುದ್ಧಿ ಹೀನ ತನು ಜಾನಿಕೇ ಸುಮಿರೌಂ ಪವನ ಕುಮಾರ।
ಬಲ ಬುದ್ಧಿ ಬಿದ್ಯಾ ದೇಹು ಮೋಹಿ, ಹರಹು ಕಲೇಸ ಬಿಕಾರ॥

ಹೇ ಸರ್ವ ವಿದ್ಯಾ ಸಂಪನ್ನನೇ ! ಬುದ್ಧಿಹೀನನಾದ ನನಗೆ ಸುಬುದ್ಧಿಯನ್ನು ಕರುಣಿಸು. ಬಲ, ಬುದ್ಧಿ, ವಿದ್ಯೆ ಇತ್ಯಾದಿಗಳನ್ನು ಅನುಗ್ರಹಿಸು. ನನ್ನ ಕಷ್ಟ, ಕ್ಲೇಶ, ದುಃಖ ಹಾಗೂ ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ, ಅಹಂಕಾರ ಅಸೂಯಾದಿ ಷಡ್ ವಿಕಾರಗಳನ್ನು ಹೋಗಲಾಡಿಸು ಎಂದು ನಿನ್ನಲ್ಲಿ ವಿನಂತಿಸಿಕೊಳ್ಳುವೆನು.

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಚೌಪಾಯೇ ॥

ಜಯ ಹನುಮಾನ್ ಜ್ಞಾನ ಗುನ ಸಾಗರ।
ಜಯ ಕಪೀಶ ತಿಹುಂ ಲೋಕ ಉಜಾಗರ ॥ ೧ ॥

ಜ್ಞಾನ ಮತ್ತು ಗುಣಗಳ ಸಾಗರನಾದ ವೀರ ಹನುಮಂತನಿಗೆ ಜಯ ಜಯಕಾರವು! ಮೂರು ಲೋಕಗಳಲ್ಲಿಯೂ ಬೆಳಗುವ ಹಾಗೂ ಕೀರ್ತಿಯನ್ನು ಗಳಿಸಿದ ಕಪೀಶ್ವರನಿಗೆ ವಿಜಯವಾಗಲಿ!

ರಾಮದೂತ ಅತುಲಿತ ಬಲ ಧಾಮಾ।
ಅಂಜನಿಪುತ್ರ ಪವನಸುತ ನಾಮಾ ॥ ೨ ॥

ಹೇ, ರಾಮದೂತ ವಾಯುಪುತ್ರನೇ! ಹೇ ಅಂಜನಿಸುತ ಆಂಜನೇಯನೇ! ಹೇ ಅತ್ಯಂತ ಬಲ ಶಾಲಿಯೇ! ನಿನಗೆ ಅನಂತ ವಂದನೆ.

ಮಹಾಬೀರ ಬಿಕ್ರಮ ಬಜರಂಗೀ।
ಕುಮತಿ ನಿವಾರ ಸುಮತಿ ಕೇ ಸಂಗೀ ॥ ೩ ॥

ಹೇ ಕಪೀಶ್ವರ! ನಿನಗೆ ಸಾಷ್ಟಾಂಗ ವಂದನೆ. ನೀನು ಮಹಾನ್ ವೀರನು, ಮಹಾ ಪರಾಕ್ರಮ ಶಾಲಿಯು, ವಜ್ರದಂತೆ ಬಲಯುತ ಶರೀರವುಳ್ಳವನು. ನೀನು ದುರ್ಬುದ್ಧಿಯುಳ್ಳವರ ಸಂಗದಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಕ್ತಗೊಳಿಸಿ ನಮಗೆ ಸದ್ಬುದ್ಧಿಯುಳ್ಳವರ ಸಂಗವನ್ನು ದೊರಕಿಸಿ ಕೊಡುವಿ.

ಕಂಚನ ಬರನ ಬಿರಾಜ ಸುಬೇಸಾ ।
ಕಾನನ ಕುಂಡಲ ಕುಂಚಿತ ಕೇಸಾ ॥ ೪ ॥

ಸುವರ್ಣ ಕಾಂತಿಯುಕ್ತ ನಿನ್ನ ಸರ್ವೋತ್ಕೃಷ್ಟ ರೂಪವು ಅತ್ಯಂತ ಶೋಭಾಯಮಾನವಾಗಿದೆ. ಸುಂದರವಾದ ಕರ್ಣಕುಂಡಲಗಳಿಂದಲೂ, ವಸ್ತ್ರಗಳಿಂದಲೂ, ಮಿಂಚಿನಂತಹ ಅಂದವಾದ ಗುಂಗುರ ಕೇಶರಾಶಿಯಿಂದಲೂ ಶೋಭಿಸುತ್ತಿರುವ ಹನುಮಂತನಿಗೆ ಅನಂತ ಪ್ರಣಾಮಗಳು.

ಹಾಥ ಬಜ್ರ ಔ ಧ್ವಜಾ ಬಿರಾಜೈ ।
ಕಾಂಧೇ ಮೂಂಜ ಜನೇಊ ಸಾಜೈ ॥ ೫ ॥

ನಿನ್ನ ಹಸ್ತದಲ್ಲಿ ವಜ್ರ ಮತ್ತು ಧ್ವಜ ಸುಶೋಭಿಸುತ್ತಿವೆ. ನಿನ್ನ ಹೆಗಲ ಮೇಲೆ ಪವಿತ್ರ ಯಜ್ಞೋಪವಿತವು ಅಲಂಕಾರ ಪ್ರಾಯವಾಗಿದೆ. ಓ, ಪವನಸುತನೇ! ನಿನಗೆ ಅನಂತಾನಂತ ಪ್ರಣಾಮಗಳು.

ಶಂಕರ ಸುವನ ಕೇಸರೀ ನಂದನ ।
ತೇಜ ಪ್ರತಾಪ ಮಹಾ ಜಗಬಂದನ ॥ ೬ ॥

CC-O. In Public Domain. Digitized by eGangotri

ಓ, ಮಾರುತೀ! ನೀನು ಸಾಕ್ಷಾತ್ ಶಂಕರನ ಅವತಾರಿಯಾಗಿರುವೆ. ಪ್ರಭು ರಾಮಚಂದ್ರನ ಸೇವೆಗಾಗಿ ನೀನು ಕೇಸರಿನಂದನ ರೂಪದಲ್ಲಿ ಪ್ರಕಟನಾಗಿರುವಿ. ನಿನ್ನ ಪರಾಕ್ರಮ ಮತ್ತು ತೇಜಸ್ಸು ಅಪರಿಮಿತವಾದದ್ದು ಇರುತ್ತದೆ. ಈ ಸಮಸ್ತ ಲೋಕಕ್ಕೆಲ್ಲಾ ನೀನು ವಂದನೀಯನಾಗಿರುವಿ.

ವಿದ್ಯಾವಾನ್‌ಗುನೀ ಅತಿ ಚಾತುರ।
ರಾಮ ಕಾಜ ಕರಿಬೇ ಕೋ ಆತುರ॥ ೭॥

ಹೇ ರಾಮದೂತನೇ! ನೀನು ಅತ್ಯಂತ ಚತುರನೂ, ವಿದ್ವಾಂಸನೂ, ಸದ್ಗುಣ ಸಂಪನ್ನನೂ ಆಗಿರುವಿ. ಪ್ರಭು ಶ್ರೀ ರಾಮಚಂದ್ರನ ಕಾರ್ಯಗಳನ್ನು ನೆರವೇರಿಸಲು ಸದಾ ಆತುರನಾಗಿರುವಿ. ಹೇ, ವಜ್ರಕಾಯನೇ! ನಿನಗೆ ಶಿರಸಾ ನಮಿಸುವೆನು.

ಪ್ರಭು ಚರಿತ್ರ ಸುನಿಬೇ ಕೋ ರಸಿಯಾ।
ರಾಮ ಲಖಿನ ಸೀತಾ ಮನ ಬಸಿಯಾ॥ ೮॥

ಪ್ರಭು ಶ್ರೀರಾಮಚಂದ್ರನ ದಿವ್ಯ ಚರಿತ್ರೆಯನ್ನು ಕೇಳುತ್ತ ಮೈ ಮರೆಯುವ ರಸಿಕನು ನೀನು. ಶ್ರೀರಾಮ, ಲಕ್ಷ್ಮಣ, ಸೀತಾ ನಿನ್ನ ಮನಸ್ಸಿನಲ್ಲಿ ಸದಾ ನೆಲೆಸಿದ್ದಾರೆ. ಕಪಿವರ್ಯನೇ! ನಿನಗೆ ನನ್ನ ಅಗಣಿತ ವಂದನೆಗಳು.

CC-0. In Public Domain. Digitized by eGangotri

ಸೂಕ್ಷ್ಮ ರೂಪ ಧರಿ ಸಿಯಹಿಂ ದಿಖಾವಾ ।
ಬಿಕಟ ರೂಪ ಧರಿ ಲಂಕ ಜರಾವಾ ॥ ೯ ॥

ಅಶೋಕವನದಲ್ಲಿ ಬಂಧಿತಳಾಗಿದ್ದ ಸೀತಾ ಮಾತೆಗೆ ನೀನು ಅತಿ ಸೂಕ್ಷ್ಮವಾದ ರೂಪದಿಂದ ಕಾಣಿಸಿಕೊಂಡಿರುವಿ. ಆದರೆ ವಿಕಟ (ಘೋರ) ರೂಪ ಧಾರಣ ಮಾಡಿ ಲಂಕೆಯ ದಹನವನ್ನು ಮಾಡಿರುವಿ. ಓ, ಲೀಲಾಮಯ ಹನುಮನೇ! ನಿನಗೆ ಕೋಟಿ ಕೋಟಿ ಪ್ರಣಾಮಗಳು.

ಭೀಮ ರೂಪ ಧರಿ ಅಸುರ ಸಂಹಾರೇ ।
ರಾಮಚಂದ್ರ ಕೇ ಕಾಜ ಸಂವಾರೇ ॥ ೧೦ ॥

ಹೇ ಧೀರ ಮಾರುತಿಯೇ! ನೀನು ಭೀಮಾಕಾರ (ಭಯಂಕರ) ರೂಪ ಧರಿಸಿ ಅಸುರರ ಸಂಹಾರ ಮಾಡಿ ಶ್ರೀ ರಾಮನ ಕಾರ್ಯವನ್ನು ಪೂರ್ಣಗೊಳಿಸುವಲ್ಲಿ ಸಹಕರಿಸಿರುವಿ. ನಿನಗೆ ಪುನಃ ಪುನಃ ಪ್ರಣಾಮ.

ಲಾಯ ಸಂಜೀವನ ಲಖನ ಜಿಯಾಯೇ ।
ಶ್ರೀ ರಘುಬೀರ ಹರಷೀ ಉರ ಲಾಯೇ ॥ ೧೧ ॥

ಹೇ, ದಶಬಾಹುವೇ! ನೀನು ಅಮೃತ ಸಂಜೀವಿನಿ ದಿವ್ಯ ಔಷಧವನ್ನು ತಂದು ಮೂರ್ಛೆ ಹೋದ ಲಕ್ಷ್ಮಣನಿಗೆ ಜೀವ ದಾನ ಮಾಡಿರುವಿ. ನಿನ್ನ ಕಾರ್ಯದಿಂದ ಪ್ರಸನ್ನನಾದ ಪ್ರಭು ರಾಮನು ನಿನ್ನನ್ನು ಅಪರಿಮಿತ ಆನಂದದಿಂದ ತನ್ನ ಎದೆಗೆ ಬಿಗಿದಪ್ಪಿಕೊಂಡನು.

Sri Vidyabharathi Book Centre, Sringeri

CC-O. In Public Domain. Digitized by eGangotri

ರಘುಪತಿ ಕೀನ್ಹೀ ಬಹುತ ಬಡಾಈ।
ತುಮ ಮಮ ಪ್ರಿಯ ಭರತ ಹಿ ಸಮ ಭಾಯೀ ॥ ೧೨ ॥

ನಿನ್ನ ಸೇವೆಯಿಂದ ಸಂತುಷ್ಟನಾದ ಶ್ರೀ ರಾಮಚಂದ್ರನು ನಿನ್ನನ್ನು ಈ ಪ್ರಕಾರ ಸ್ತುತಿಸಿದನು–'ಹೇ, ಹನುಮಂತ! ನೀನು ನನ್ನ ಪ್ರಿಯ ಸಹೋದರ ಭರತನಂತೆ ಪ್ರಿಯ ಬಂಧು ವಾಗಿರುವಿ.'

ಸಹಸ ಬದನ ತುಮ್ಹಾರೋ ಯಶ ಗಾವೈಂ।
ಅಸ ಕಹಿ ಶ್ರೀಪತಿ ಕಂಠ ಲಗಾವೈಂ ॥ ೧೩ ॥

ಓ, ಭಕ್ತ ಪ್ರಿಯ ಮಾರುತಿಯೇ! ಸಹಸ್ರ ಸಹಸ್ರ ಮುಖಗಳು ನಿನ್ನ ಕೀರ್ತಿಯ ಗುಣಗಾನ ಮಾಡುತ್ತಲಿವೆ. ಆದ ಕಾರಣ ಶ್ರೀ ಪ್ರಭುರಾಮನು ನಿನಗೆ ಗಾಢ ಆಲಿಂಗನ ಮಾಡಿದನು. ನಿನಗೆ ಪುನಃ ಪುನಃ ವಂದನೆಗಳು.

ಸನಕಾದಿಕ ಬ್ರಹ್ಮಾದಿ ಮುನೀಸಾ ।
ನಾರದ ಸಾರದ ಸಹಿತ ಅಹೀಸಾ ॥ ೧೪ ॥

ಹೇ, ಆಂಜನೇಯ ಸ್ವಾಮಿಯೇ! ಸನಕಾದಿ ಮುನಿಗಳು, ನಾರದ ಮಹರ್ಷಿಗಳು, ಆದಿಶೇಷನು, ಬ್ರಹ್ಮ ದೇವರು, ಶಾರದಾ ಮಾತೆಯ ಸಹಿತ ಸರ್ವರೂ ನಿನ್ನ ಗುಣಗಳನ್ನು ಹಾಡಿ ಹೊಗಳುತ್ತಿರುವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಜಮ ಕುಬೇರ ದಿಗಪಾಲ ಜಹಾಂತೇ ।
ಕಬಿ ಕೋಬಿದ ಕಹಿ ಸಕೇ ಕಹಾಂ ತೇ ॥ ೧೫ ॥

ಹೇ ಹನುಮಂತ! ಸರ್ವ ಶ್ರೇಷ್ಠ ಲೋಕಗಳಲ್ಲಿಯ ಯಮ, ಕುಬೇರ, ದಿಕ್ಪಾಲಕರು ಸರ್ಪರಾಜ, ವ್ಯಾಸ ಮುನಿ, ಕವಿಗಳು, ಪಂಡಿತರು, ಯಾರೊಬ್ಬರೂ ಸಹ ನಿನ್ನ ಕೀರ್ತಿಯನ್ನು ವರ್ಣಿಸಲಾರರು. ನಿನಗೆ ಸಾಷ್ಟಾಂಗ ಪ್ರಣಾಮಗಳು.

ತುಮ ಉಪಕಾರ ಸುಗ್ರೀವಹಿಂ ಕೀನ್ಹಾ ।
ರಾಮ ಮಿಲಾಯ ರಾಜಪದ ದೀನ್ಹಾ ॥೧೬॥

ಹೇ, ಪವನ ಸುತನೇ! ರಾಜ್ಯವನ್ನು ಕಳೆದುಕೊಂಡು ನಿರ್ಗತಿಕನಾದ ಸುಗ್ರೀವನನ್ನು ನೀನು ಶ್ರೀ ರಾಮಚಂದ್ರನೊಡನೆ ಭೇಟಿ ಮಾಡಿಸಿ ಅವನಿಗೆ ಉಪಕಾರ ಮಾಡಿರುವೆ. ಸುಗ್ರೀವನಿಗೆ ಆತನ ರಾಜ್ಯವನ್ನು ಪುನಃ ಕೊಡಿಸಿ ಮಹದುಪಕಾರ ಮಾಡಿರುವ ನಿನಗೆ ನಮನಗಳು.

ತುಮ್ಹರೋ ಮಂತ್ರ ಬಿಭೀಷಣ ಮಾನಾ ।
ಲಂಕೇಶ್ವರ ಭಏ ಸಬ ಜಗ ಜಾನಾ ॥ ೧೭ ॥

ಓ ತತ್ತ್ವಜ್ಞಾನಿಯೇ! ನಿನ್ನ ಹಿತೋಪದೇಶವನ್ನು ವಿಭೀಷಣನು ಮಾನ್ಯ ಮಾಡಿ ಅದರಂತೆ ಆಚರಿಸಿ ತನ್ನ ಹಿತವನ್ನು ಸಾಧಿಸಿಕೊಂಡನು ಹಾಗೂ ಲಂಕಾಧಿಪತಿಯಾದನು. ಈ ವಿಷಯವು ಸರ್ವತ್ರ ವಿದಿತವಿದೆ.

CC-O. In Public Domain. Digitized by eGangotri

ಜುಗ ಸಹಸ್ರ ಜೋಜನ ಪರ ಭಾನೂ ।
ಲೀಲ್ಯೋ ತಾಹಿ ಮಧುರ ಫಲ ಜಾನೂ ॥ ೧೮ ॥

ಹೇ, ಮಹಾವೀರ ಹನುಮಂತನೇ! ಸಾವಿರ ಯೋಜನ ಅಂತರದಲ್ಲಿರುವ ಸೂರ್ಯನನ್ನು ತಲುಪಲು ಯುಗ-ಯುಗಗಳೇ ಬೇಕಾಗುತ್ತವೆ. ಹೊಂಬಣ್ಣದ ರವಿಯನ್ನು ಮಧುರವಾದ ಫಲವೆಂದು ಬಗೆದು ಲೀಲಾಜಾಲವಾಗಿ ನೀನು ಅಂತರಿಕ್ಷಕ್ಕೆ ಹಾರಿದೆ. ನಿನಗೆ ಶರಣು ಶರಣು.

ಪ್ರಭು ಮುದ್ರಿಕಾ ಮೇಲಿ ಮುಖ ಮಾಹೀಂ ।
ಜಲಧಿ ಲಾಂಘಿ ಗಯೇ ಅಚರಜ ನಾಹೀಂ ॥ ೧೯ ॥

ಹೇ ಮಹಾವೀರ ಮಾರುತಿ ರಾಯನೇ! ಪ್ರಭು ರಾಮಚಂದ್ರನಿಂದ ಅನುಗ್ರಹಿತವಾದ ಪವಿತ್ರ ಉಂಗುರವನ್ನು ಬಾಯಿಯಲ್ಲಿ ಇಟ್ಟುಕೊಂಡು ನೀನು ಅನಾಯಾಸವಾಗಿ ಸಮುದ್ರ ಲಂಘನ ಮಾಡಿದೆ. ನಿನಗೆ ಅದು ಆಶ್ಚರ್ಯವಲ್ಲ. ಇದರಲ್ಲಿ ಅತಿಶಯೋಕ್ತಿಯಿಲ್ಲ.

ದುರ್ಗಮ ಕಾಜ ಜಗತ ಕೇ ಜೇತೇ ।
ಸುಗಮ ಅನುಗ್ರಹ ತುಮ್ಹರೇ ತೇತೇ ॥ ೨೦ ॥

ಓ ಮಾರುತಾತ್ಮಜನೇ! ಭಕ್ತರ ಅತ್ಯಂತ ಕಠಿಣ ಕಾರ್ಯಗಳೂ ಸಹ ನಿನ್ನ ಅನುಗ್ರಹದಿಂದ ಸಹಜವಾಗಿ ಹಾಗೂ ಸುಲಭವಾಗಿ ಪೂರ್ಣಗೊಳ್ಳುತವೆ. ನಿನಗೆ ಶಿರಸಾ ವಂದನೆಗಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮ ದು ಆರೇ ತುಮ ರಖವಾರೇ।
ಹೋತನ ಆಜ್ಞಾ ಬಿನು ಪೈ ಸಾರೇ ॥ ೨೧ ॥

ಹೇ, ಪ್ರತಾಪ ಪತೆಯೇ! ನೀನು ಶ್ರೀರಾಮ ಚಂದ್ರನ ಮಂದಿರದ ದ್ವಾರಪಾಲಕನಾಗಿರುವಿ. ನೀನು ನಿರಂತರವೂ ಆತನ ಸನ್ನಿಧಿಯಲ್ಲೇ ಇರುವಿ. ನಿನ್ನ ಆಜ್ಞೆಯಿಲ್ಲದೇ ಯಾರೂ ಅಲ್ಲಿ ಪ್ರವೇಶಿಸಲಾರರು ಹಾಗೂ ಪ್ರಭುವಿನ ದರ್ಶನ ಪಡೆಯಲಾರರು.

ಸಬ ಸುಖ ಲಹೈ ತುಮ್ಹಾರೀ ಸರನಾ।
ತುಮ ರಕ್ಷಕ ಕಾಹೂ ಕೋ ಡರನಾ ॥ ೨೨ ॥

ಹೇ, ಮಾರುತಾತ್ಮಜ! ನಿನಗೆ ಶರಣು ಬಂದವರಿಗೆಲ್ಲಾ ಸರ್ವ ಸುಖಗಳು ಲಭಿಸುತ್ತವೆ. ನೀನು ಭಕ್ತರ ರಕ್ಷಣೆ ಮಾಡುವವನಾಗಿರುವುದರಿಂದ ಅವರಿಗೆ ಇನ್ನೆಲ್ಲಿಯ ಭಯವು? ನಿನ್ನ ಭಕ್ತರು ಭಯದಿಂದ ಮುಕ್ತರಾಗುವರು.

ಆಪನ ತೇಜ ಸಮ್ಹಾರೋ ಆಪೈ।
ತೀನೋಂ ಲೋಕ ಹಾಂಕ ತೇಂ ಕಾಂಪೈ ॥ ೨೩ ॥

ಹೇ, ಮಹಾವೀರ! ನಿನ್ನ ತೇಜಸ್ಸಿಗೆ, ವೇಗಕ್ಕೆ ನೀನೇ ಸರಿಸಾಟಿಯಿರುವಿ ವಿನಃ ಬೇರೆ ಯಾರೂ ಇರುವುದಿಲ್ಲ. ನಿನ್ನ ಘರ್ಜನೆಗೆ ಮೂರು ಲೋಕಗಳು ಸಹ ಭಯದಿಂದ ನಡುಗಿ ತತ್ತರಿಸಿ ಹೋಗುವವು.

Sri Vidyabharathi Book Centre, Sringeri

CC-O. In Public Domain. Digitized by eGangotri

ಭೂತ ಪಿಶಾಚ ನಿಕಟ ನಹಿಂ ಆವೈ।
ಮಹಾಬೀರ ಜಬ ನಾಮ ಸುನಾವೈ॥ ೨೪॥

ಹೇ, ಮಹಾವೀರ ಭಜರಂಗ ಬಲಿ! ಯಾರು ನಿನ್ನ ನಾಮಸ್ಮರಣೆಯನ್ನು ಮಾಡುವರೋ, ಅಂತಹವರ ಸಮೀಪ ಭೂತ, ಪಿಶಾಚ ಇತ್ಯಾದಿ ದುಷ್ಟ ಶಕ್ತಿಗಳು ಎಂದೆಂದಿಗೂ ಸುಳಿಯುವುದಿಲ್ಲ.

ನಾಸೈ ರೋಗ ಹರೈ ಸಬ ಪೀರಾ।
ಜಪತ ನಿರಂತರ ಹನುಮಂತ ಬೀರಾ॥ ೨೫॥

ಓ, ಮಹಾವೀರನೇ! ಯಾರು ನಿನ್ನ ನಾಮ ಜಪವನ್ನು ನಿರಂತರ ಜಪಿಸುವರೋ ಅವರ ಸರ್ವ ವ್ಯಾಧಿಗಳು ಮತ್ತು ಕಷ್ಟ – ಪೀಡೆಗಳೆಲ್ಲವೂ ನಾಶವಾಗುತ್ತವೆ.

ಸಂಕಟ ತೇ ಹನುಮಾನ ಛುಡಾವೈ।
ಮನ ಕ್ರಮ ವಚನ ಧ್ಯಾನ ಜೋ ಲಾವೈ॥ ೨೬॥

ಹೇ, ಹನುಮಾನ್! ಯಾವ ನಿನ್ನ ಭಕ್ತನು ಕಾಯಾ–ವಾಚಾ–ಮನ–ಇಂದ್ರಿಯಗಳಿಂದ ನಿನ್ನ ಧ್ಯಾನವನ್ನು ಮಾಡುವನೋ ಅಂತಹ ನಿನ್ನ ಭಕ್ತನು ಸರ್ವ ಸಂಕಟ–ದುಃಖಗಳಿಂದ ಬಿಡುಗಡೆ ಹೊಂದುವನು.

CC-O. In Public Domain. Digitized by eGangotri

ಸಬ ಪರ ರಾಮ ತಪಸ್ವೀ ರಾಜಾ।
ತಿನಕೇ ಕಾಜ ಸಕಲ ತುಮ ಸಾಜಾ ॥ ೨೭ ॥

ಹೇ, ರಾಮಬಂಟ ಹನುಮಂತ! ಸಾರ್ವಭೌಮ ಶ್ರೀ ರಾಮಚಂದ್ರನು ವಿಶ್ವದಲ್ಲಿಯೇ ಸರ್ವ ಶ್ರೇಷ್ಠನಾದ ತಪಸ್ವಿ ರಾಜನು. ಆತನ ಎಲ್ಲ ಕಾರ್ಯಗಳಲ್ಲಿ ಭಾಗವಹಿಸಿ ನೀನು ಅವುಗಳನ್ನು ಸಫಲಗೊಳಿಸಿರುವೆ.

ಔರ ಮನೋರಥ ಜೋ ಕೋಇ ಲಾವೈ।
ಸೋಇ ಅಮಿತ ಜೀವನ ಫಲ ಪಾವೈ ॥ ೨೮ ॥

ಓ, ರಾಮದೂತನೇ! ಯಾರು ಭಕ್ತಿಯಿಂದ ನಿನ್ನ ಸ್ಮರಣೆಯನ್ನು ಮಾಡುವರೋ ಅಂತಹವರ ಸರ್ವ ಮನೋಕಾಮನೆಗಳು ಸಫಲವಾಗುತ್ತವೆ. ನಿನ್ನ ಭಕ್ತರಿಗೆ ಅಮಿತ ಫಲ ಲಭಿಸುತ್ತದೆ.

ಚಾರೋ ಜುಗ ಪರತಾಪ ತುಮ್ಹಾರಾ।
ಹೈ ಪರ ಸಿದ್ಧ ಜಗತ ಉಜಿಯಾರಾ ॥ ೨೯ ॥

ಹೇ, ರಾಮಭಕ್ತ ಮಾರುತಿ! ನಿನಗೆ ಸಾಷ್ಟಾಂಗ ಪ್ರಣಾಮಗಳು. ನಿನ್ನ ಪ್ರತಾಪವು, ಪರಾಕ್ರಮವು ನಾಲ್ಕೂ ಯುಗಗಳಲ್ಲಿ ಪ್ರಸಿದ್ಧವಾಗಿದೆ. ನಿನ್ನ ಕೀರ್ತಿ–ಪ್ರಕಾಶ ಈ ಜಗತ್ತಿನಲ್ಲೆಲ್ಲಾ ಪ್ರಕಾಶಿಸುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಧು–ಸಂತ ಕೇ ತುಮ ರಖವಾರೇ।
ಅಸುರ ನಿಕಂದನ ರಾಮ ದುಲಾರೇ ॥ ೩೦ ॥

ಹೇ ಅಂಜನಿ ಪುತ್ರನೇ! ನೀನು ಸಾಧು–ಸಂತರನ್ನು, ಸಜ್ಜನರನ್ನು, ಧರ್ಮವನ್ನು, ರಕ್ಷಿಸುವವನಿರುವಿ, ಅಸುರರ ಉಚ್ಚಾಟನೆಯಲ್ಲಿ ನಿರತನಾಗಿರುವಿ. ಆದುದರಿಂದ ನೀನು ಶ್ರೀರಾಮನಿಗೆ ಅತ್ಯಂತ ಪ್ರಿಯನಾಗಿರುವಿ.

ಅಷ್ಟ ಸಿದ್ಧಿ ನವ ನಿಧಿ ಕೇ ದಾತಾ।
ಅಸ ಬರ ದೀನ ಜಾನಕೀ ಮಾತಾ ॥ ೩೧ ॥

ಹೇ ಭಕ್ತ ಪ್ರಿಯ ಹನುಮನೇ! ಜಾನಕೀ ಮಾತೆಯ ಆಶೀರ್ವಾದದ ಬಲದಿಂದ ನೀನು ನಿನ್ನ ಭಕ್ತರಿಗೆ ಅಷ್ಟ ಸಿದ್ಧಿಗಳನ್ನು, ನವ ನಿಧಿಗಳನ್ನು ಕರುಣಿಸುವ ಸಾಮರ್ಥ್ಯವುಳ್ಳವನಾಗಿರುವೆ.

ರಾಮ ರಸಾಯನ ತುಮ್ಹರೇ ಪಾಸಾ।
ಸದಾ ರಹೋ ರಘುಪತಿ ಕೇ ದಾಸಾ ॥ ೩೨ ॥

ಓ, ಕಪೀಶ್ವರನೇ! ರಾಮ ನಾಮ ರೂಪಿ ರಸಾಯನವು ನಿನ್ನ ಬಳಿಯಲ್ಲಿರುವುದು. ರಘುಪತಿಯ ದಾಸನಾಗಿ ನೀನು ಸದೋದಿತ ಆತನ ದಿವ್ಯ ಸನ್ನಿಧಿಯಲ್ಲಿ ನೆಲೆಸಿರುವೆ. ನಿನಗೆ ಶತಕೋಟಿ ಪ್ರಣಾಮಗಳು.

CC-O. In Public Domain. Digitized by eGangotri

ತುಮ್ಹರೇ ಭಜನ ರಾಮ ಕೋ ಪಾವೈ।
ಜನಮ ಜನಮ ಕೇ ದುಃಖ ಬಿಸರಾವೈ ॥ ೩೩ ॥

ಹೇ, ಸುಗ್ರೀವ ಸಚಿವನೇ! ನಿನ್ನ ಭಜನೆ, ಭಕ್ತಿ ಮಾಡಿದರೆ ಅದು ಶ್ರೀ ರಾಮಚಂದ್ರನಿಂದ ಸ್ವೀಕೃತವಾಗುತ್ತದೆ. ಶ್ರೀ ರಾಮಚಂದ್ರನ ದರ್ಶನವಾಗುತ್ತದೆ. ಭಕ್ತರ ಜನ್ಮ-ಜನ್ಮಾಂತರದ ದುಃಖವು ನಾಶವಾಗುತ್ತದೆ.

ಅಂತಕಾಲ ರಘು ಭರಪುರ ಜಾಈ।
ಜಹಾಂ ಜನ್ಮ ಹರಿ ಭಕ್ತ ಕಹಾಈ ॥ ೩೪ ॥

ಹೇ, ಮುಖ್ಯಪ್ರಾಣನೇ! ನಿನ್ನ ನಿಸ್ಸೀಮ ಭಕ್ತರು ಅಂತ್ಯಕಾಲದಲ್ಲಿ ಅಯೋಧ್ಯಾಧಿಪತಿ ಶ್ರೀರಾಮನ ಪವಿತ್ರ ಚರಣದಡಿಯಲ್ಲಿ ಸ್ಥಾನ ಪಡೆಯುವರು. ಅಯೋಧ್ಯೆಯಲ್ಲಿ ಜನಿಸಿದವನು ತನ್ನ ಜೀವನ ಪರ್ಯಂತ ಹರಿ ಭಕ್ತನೆನಿಸಿಕೊಳ್ಳುವನು.

ಔರ ದೇವತಾ ಚಿತ್ತ ನ ಧರ ಈ।
ಹನುಮತ ಸೇಇ ಸರ್ಬ ಸುಖ ಕರಈ ॥ ೩೫ ॥

ಓ, ಸರ್ವ ದುಃಖ ಹರನೇ! ಅನ್ಯ ದೇವತೆಗಳನ್ನು ಮನಸ್ಸಿನಲ್ಲಿ ತರದೆ ಅನನ್ಯ ಭಾವದಿಂದ ನಿನ್ನನ್ನು ಭಜಿಸುವವರು ಸರ್ವ ವಿಧದ ಸುಖ-ಭೋಗಗಳನ್ನು ಪಡೆಯುವರು. ಹೀಗಿರುವಾಗ ಇತರ ದೇವತೆಗಳ ಪೂಜೆಯ ಅವಶ್ಯಕತೆಯಾದರೂ ಏನು?

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಕಟ ಕಟೈ ಮಿಟೈ ಸಬ ಪೀರಾ।
ಜೋ ಸುಮಿರೈ ಹನುಮತ ಬಲವೀರಾ ॥ ೩೬ ॥

ಹೇ, ಮಹಾಬಲವಂತ ಹನುಮನೇ! ನಿನ್ನ ಸ್ಮರಣ ಮಾತ್ರದಿಂದಲೇ ಭಕ್ತರು ಸರ್ವ ಸಂಕಟ ಹಾಗೂ ಪೀಡೆಗಳಿಂದ ಮುಕ್ತರಾಗುವರು.

ಜೈ ಜೈ ಜೈ ಹನುಮಾನ ಗೋಸಾಈಂ।
ಕೃಪಾ ಕರಹು ಗುರುದೇವ ಕೀ ನಾಈಂ ॥ ೩೭ ॥

ಹೇ, ಜೀತೇಂದ್ರಿಯನಾದ ಗೋಸ್ವಾಮಿಯೇ! ನಿನಗೆ ನನ್ನ ಜಯ ಜಯಕಾರಗಳು. ಗುರುದೇವರು ಕೃಪೆ ಮಾಡುವಂತೆ ನೀನು ನನ್ನ ಮೇಲೆ ಕೃಪೆ ತೋರಿಸು.

ಜೋ ಶತ ಬಾರ ಪಾಠ ಕರ ಕೋಈ।
ಛೂಟಹಿ ಬಂದಿ ಮಹಾಸುಖ ಹೋಈ ॥ ೩೮ ॥

ಹೇ ಚಿರಂಜೀವಿಯೇ! ನಿನಗೆ ಬಾರಿ ಬಾರಿ ಪ್ರಣಾಮಗಳು. ಯಾರು ನಿನ್ನ ಈ ಹನುಮಾನ ಚಾಲೀಸಾವೆಂಬ ಸ್ತೋತ್ರವನ್ನು ದಿನನಿತ್ಯ ನೂರು ಬಾರಿ ಪಠಿಸುವರೋ ಅವರು ಸಮಸ್ತ ಬಂಧನಗಳಿಂದ ಬಿಡುಗಡೆ ಹೊಂದಿ ಪರಮ ಸುಖಿಗಳಾಗುವರು.

CC-O. In Public Domain. Digitized by eGangotri

ಜೋ ಯಹ ಪಢೈ ಹನುಮಾನ ಚಾಲೀಸಾ।
ಹೋಯ ಸಿದ್ಧಿ ಸಾಖೀ ಗೌರೀಸಾ ॥ ೩೯ ॥

ಓ ಪ್ರಭುವೇ! ಯಾರು ನಿನ್ನ ಈ ಹನುಮಾನ ಚಾಲೀಸಾ ಸ್ತೋತ್ರವನ್ನು ದಿನ ನಿತ್ಯ ಪಠಿಸುವರೋ ಅವರಿಗೆ ಸರ್ವ ಸಿದ್ಧಿ ಪ್ರಾಪ್ತವಾಗುವುದು. ಈ ವಚನಕ್ಕೆ ಗೌರಿ ಶಂಕರನೇ ಸಾಕ್ಷಿಯು.

ತುಲಸಿ ದಾಸ ಸದಾ ಹರಿ ಚೇರಾ।
ಕೀಜೈ ನಾಥ ಹೃದಯ ಮಹಂ ಡೇರಾ ॥ ೪೦ ॥

ತುಲಸೀದಾಸರು ಈ ಪ್ರಕಾರ ಪ್ರಾರ್ಥಿಸುವರು – "ಹೇ, ಮಹಾಯೋಗಿಯೇ! ನಾನು ಸದಾ ಶ್ರೀ ರಾಮನ ದಾಸನು. ನೀನು ನನ್ನ ಹೃದಯದಲ್ಲಿ ನಿರಂತರ ವಾಸಿಸು. ಕಾರಣ ನೀನು ಇರುವಲ್ಲಿ ಶ್ರೀ ರಾಮ, ಸೀತಾ ಮಾತಾ ಹಾಗೂ ಲಕ್ಷ್ಮಣ ಇವರೆಲ್ಲರೂ ಸಹ ವಾಸ ಮಾಡುತ್ತಾರೆ."

ಪವನ ತನಯ ಸಂಕಟ ಹರನ ಮಂಗಲ ಮೂರತಿ ರೂಪ।
ರಾಮ ಲಖಿನ ಸೀತಾ ಸಹಿತ ಹೃದಯ ಬಸಹು ಸುರ ಭೂಪ ॥
ಇತಿ ತುಲಸೀದಾಸಕೃತ ಹನುಮಾನ ಚಾಲೀಸಾ ಸಂಪೂರ್ಣಮ್ ॥

ಹೇ ಮಂಗಳ ಸ್ವರೂಪಿ ಪವನ ತನಯ! ನೀನು ಜನನ–ಮರಣ ರೂಪೀ ಭವವ್ಯಾಧಿಯಿಂದ ಮುಕ್ತಗೊಳಿಸುವವನಿರುವಿ. ಸಂಕಟ ಹರ ಮಾರುತಿಯೇ! ಪ್ರಭು ಶ್ರೀ ರಾಮಚಂದ್ರನು ಸೀತಾ,

Sri Vidyabharathi Book Centre, Sringeri

CC-O. In Public Domain. Digitized by eGangotri

ಲಕ್ಷ್ಮಣರೊಡನೆ ನಿನ್ನ ಹೃದಯದಲ್ಲಿ ನೆಲೆಸಿರುವನು. ಹೇ ಸರ್ವ ರಕ್ಷಕ ಹನುಮಂತನೇ! ನೀನು ಅವರೆಲ್ಲರೊಂದಿಗೆ ನನ್ನ ಹೃದಯದಲ್ಲಿ ನೆಲೆಸಿ ಅನುಗ್ರಹಿಸು.

ಮನೋಜವಂ ಮಾರುತತುಲ್ಯವೇಗಂ
ಜೀತೇಂದ್ರಿಯಂ ಬುದ್ಧಿಮತಾಂ ವರಿಷ್ಠಮ್ ।
ವಾತಾತ್ಮಜಂ ವಾನರಯೂಥ ಮುಖ್ಯಂ
ಶ್ರೀ ರಾಮದೂತಂ ಶರಣಂ ಪ್ರಪದ್ಯೇ ॥

ಮನಸ್ಸಿನ ವೇಗದ ಪ್ರಮಾಣೆ ಧಾವಿಸುವವನೇ! ವಾಯುವಿನಂತೆ ಗತಿಯುಳ್ಳವನೇ! ಇಂದ್ರಿಯಗಳನ್ನು ನಿಗ್ರಹಿಸಿದವನೇ! ಬುದ್ಧಿವಂತರಲ್ಲಿ ಶ್ರೇಷ್ಠತಮನಾಗಿರುವವನೇ! ವಾನರ ಸೇನೆಯ ಪ್ರಮುಖನಾಗಿರುವವನೇ! ಶ್ರೀ ರಾಮ ದೂತನೇ! ಭವರೋಗದಿಂದ ವಿಮುಕ್ತಗೊಳಿಸುವವನೇ! ಸರ್ವರಕ್ಷಕನಾದ ನಿನಗೆ ಶರಣು ಬಂದಿರುವೆನು.

ಶ್ರೀ ಆಂಜನೇಯಾಷ್ಟೋತ್ತರ (ಸೇವಭಾವ ಸಮೃದ್ಧಿಗಾಗಿ)

ಓಂ ಆಂಜನೇಯಾಯ ನಮಃ ।
ಓಂ ಮಹಾವೀರಾಯ ನಮಃ ।
ಓಂ ಹನುಮತೇ ನಮಃ ।
ಓಂ ಮಾರುತಾತ್ಮಜಾಯ ನಮಃ ।
ಓಂ ತತ್ತ್ವಜ್ಞಾನಪ್ರದಾಯಕಾಯ ನಮಃ ।
ಓಂ ಸೀತಾದೇವಿಮುದ್ರಾಪ್ರದಾಯಕಾಯ ನಮಃ ।
ಓಂ ಅಶೋಕವನಿಕಾಚ್ಛೇತ್ತ್ರೇ ನಮಃ ।
ಓಂ ಸರ್ವಮಾಯಾವಿಭಂಜನಾಯ ನಮಃ ।
ಓಂ ಸರ್ವ ಬಂಧ ವಿಮೋಕ್ತ್ರೇ ನಮಃ
ಓಂ ರಕ್ಷೋವಿದ್ವಂಸಕಾರಕಾಯ ನಮಃ ॥೧೦॥

Sri Vidyabharathi Book Centre, Sringeri

CC-0. In Public Domain. Digitized by eGangotri

ಓಂ ಪರವಿದ್ಯಾಪರಿಹಾರಾಯ ನಮಃ ।
ಓಂ ಪರಶೌರ್ಯವಿನಾಶನಾಯ ನಮಃ ।
ಓಂ ಪರಮಂತ್ರನಿರಾಕರ್ತ್ರೇ ನಮಃ ।
ಓಂ ಪರಯಂತ್ರ ಪ್ರಭೇದಕಾಯ ನಮಃ ।
ಓಂ ಸರ್ವಗ್ರಹವಿನಾಶಿನೇ ನಮಃ ।
ಓಂ ಭೀಮಸೇನಸಹಾಯಕೃತೇ ನಮಃ ।
ಓಂ ಸರ್ವದುಃಖಹರಾಯ ನಮಃ ।
ಓಂ ಸರ್ವಲೋಕಚಾರಿಣೇ ನಮಃ ।
ಓಂ ಮನೋಜವಾಯ ನಮಃ ॥
ಓಂ ಪಾರಿಜಾತದ್ರುಮೂಲಸ್ಥಾಯ ನಮಃ ॥ ೨೦ ॥
ಓಂ ಸರ್ವಮಂತ್ರಸ್ವರೂಪವತೇ ನಮಃ ।
ಓಂ ಸರ್ವತಂತ್ರಸ್ವರೂಪಿಣೇ ನಮಃ ।
ಓಂ ಸರ್ವಯಂತ್ರಾತ್ಮಕಾಯ ನಮಃ ।
ಓಂ ಕಪೀಶ್ವರಾಯ ನಮಃ ।
ಓಂ ಮಹಾಕಾಯಾಯ ನಮಃ ।
ಓಂ ಸರ್ವರೋಗಹರಾಯ ನಮಃ ।
ಓಂ ಪ್ರಭವೇ ನಮಃ ।
ಓಂ ಬಲಸಿದ್ಧಿಕರಾಯ ನಮಃ ।
ಓಂ ಸರ್ವವಿದ್ಯಾಸಂಪತ್ಪ್ರದಾಯಕಾಯ ನಮಃ
ಓಂ ಕಪಿಸೇನಾನಾಯಕಾಯ ನಮಃ ॥೩೦॥
ಓಂ ಭವಿಷ್ಯಚ್ಚತುರಾನನಾಯ ನಮಃ
ಓಂ ಕುಮಾರಬ್ರಹ್ಮಚಾರಿಣೇ ನಮಃ ।
ಓಂ ರತ್ನಕುಂಡಲದೀಪ್ತಿಮತೇ ನಮಃ ।
ಓಂ ಚಂಚಲದ್ವಾಲಸನ್ನದ್ಧಲಂಬ ಮಾನ ಶಿಖೋಜ್ಜ್ವಲಾಯ ನಮಃ ।
ಓಂ ಗಂಧರ್ವ ವಿದ್ಯಾತತ್ತ್ವಜ್ಞಾಯ ನಮಃ ।
ಓಂ ಮಹಾಬಲಪರಾಕ್ರಮಾಯ ನಮಃ ।
ಓಂ ಕಾರಾಗೃಹವಿಮೋಚಕಾಯ ನಮಃ ।
ಓಂ ಶೃಂಖಲಾಬಂಧಮೋಚಕಾಯ ನಮಃ ।
ಓಂ ಸಾಗರೋತ್ತಾರಕಾಯ ನಮಃ ॥
ಓಂ ಪ್ರಾಜ್ಞಾಯ ನಮಃ ॥ ೪೦ ॥
ಓಂ ರಾಮದೂತಾಯ ನಮಃ ।
ಓಂ ಪ್ರಜಾಪವತೇ ನಮಃ ।
ಓಂ ವಾನರಾಯ ನಮಃ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಓಂ ಕೇಸರೀಸುತಾಯ ನಮಃ ।
ಓಂ ಸೀತಾಶೋಕನಿವಾರಣಾಯ ನಮಃ ।
ಓಂ ಅಂಜನಾಗರ್ಭಸಂಭೂತಾಯ ನಮಃ ।
ಓಂ ಬಾಲಾರ್ಕಸದೃಶಾನನಾಯ ನಮಃ ।
ಓಂ ವಿಭೀಷಣಪ್ರಿಯಕರಾಯ ನಮಃ ।
ಓಂ ದಶಗ್ರೀವಕುಲಾಂತಕಾಯ ನಮಃ ॥
ಓಂ ಲಕ್ಷ್ಮಣಪ್ರಾಣದಾತ್ರೇ ನಮಃ ॥ ೫೦ ॥
ಓಂ ವಜ್ರಕಾಯಾಯ ನಮಃ ।
ಓಂ ಮಹಾದ್ಯುತಯೇ ನಮಃ ।
ಓಂ ಚಿರಂಜೀವಿನೇ ನಮಃ ।
ಓಂ ರಾಮಭಕ್ತಾಯ ನಮಃ ।
ಓಂ ದೈತ್ಯಕಾರ್ಯ ವಿಘಾತಕಾಯ ನಮಃ ।
ಓಂ ಅಕ್ಷಹಂತ್ರೇ ನಮಃ ।
ಓಂ ಕಾಂಚನಾಭಾಯ ನಮಃ ।
ಓಂ ಪಂಚವಕ್ತ್ರಾಯ ನಮಃ ।
ಓಂ ಮಹಾತಪಸೇ ನಮಃ ॥
ಓಂ ಲಂಕಿನೀಭಂಜನಾಯ ನಮಃ ॥ ೬೦ ॥
ಓಂ ಶ್ರೀಮತೇ ನಮಃ ।
ಓಂ ಸಿಂಹಿಕಾಪ್ರಾಣಭಂಜನಾಯ ನಮಃ ।
ಓಂ ಗಂಧಮಾದನಶೈಲಸ್ಥಾಯ ನಮಃ ।
ಓಂ ಲಂಕಾಪುರವಿದಾಹಕಾಯ ನಮಃ ।
ಓಂ ಸುಗ್ರೀವ ಸಚಿವಾಯ ನಮಃ ।
ಓಂ ಧೀರಾಯ ನಮಃ ।
ಓಂ ಶೂರಾಯ ನಮಃ ।
ಓಂ ದೈತ್ಯಕುಲಾಂತಕಾಯ ನಮಃ ।
ಓಂ ಸುರಾರ್ಚಿತಾಯ ನಮಃ ।
ಓಂ ಮಹಾತೇಜಸೇ ನಮಃ ॥ ೭೦ ॥
ಓಂ ರಾಮಚೂಡಾಮಣಿಪ್ರದಾಯ ನಮಃ ।
ಓಂ ಕಾಮರೂಪಿಣೇ ನಮಃ ।
ಓಂ ಪಿಂಗಳಾಕ್ಷಾಯ ನಮಃ ।
ಓಂ ವಾರ್ಧಿಮೈನಾಕಪೂಜಿತಾಯ ನಮಃ ।
ಓಂ ಕಬಲೀಕೃತಮಾರ್ತಾಂಡ ಮಂಡಲಾಯ ನಮಃ ।
ಓಂ ವಿಜಿತೇಂದ್ರಿಯಾಯ ನಮಃ ।

CC-O. In Public Domain. Digitized by eGangotri

ಓಂ ರಾಮಸುಗ್ರೀವಸಂಧಾತ್ರೇ ನಮಃ ।
ಓಂ ಮಹಿರಾವಣಮರ್ದನಾಯ ನಮಃ ।
ಓಂ ಸ್ಫಟಿಕಾಭಾಯ ನಮಃ ।
ಓಂ ವಾಗಧೀಶಾಯ ನಮಃ ॥ ೮೦॥
ಓಂ ನವವ್ಯಾಕೃತಿಪಂಡಿತಾಯ ನಮಃ ।
ಓಂ ಚತುರ್ಬಾಹವೇ ನಮಃ ।
ಓಂ ದೀನಬಂಧವೇ ನಮಃ ।
ಓಂ ಮಹಾತ್ಮನೇ ನಮ:।
ಓಂ ಭಕ್ತವತ್ಸಲಾಯ ನಮಃ
ಓಂ ಸಂಜೀವನನಗಾಹರ್ತ್ರೇ ನಮಃ
ಓಂ ಶುಚಯೇ ನಮಃ ।
ಓಂ ವಾಗ್ಮಿನೇ ನಮಃ
ಓಂ ದೃಢವ್ರತಾಯ ನಮಃ ॥
ಓಂ ಕಾಲನೇಮಿಪ್ರಮಥನಾಯ ನಮಃ ॥ ೯೦ ॥
ಓಂ ಹರಿಮರ್ಕಟ ಮರ್ಕಟಾಯ ನಮಃ ।
ಓಂ ದಾಂತಾಯ ನಮಃ ।
ಓಂ ಶಾಂತಾಯ ನಮಃ ।
ಓಂ ಪ್ರಸನ್ನಾತ್ಮನೇ ನಮಃ ।
ಓಂ ಶತಕಂಠಮದಾಪಹೃತೇ ನಮಃ ।
ಓಂ ಯೋಗಿನೇ ನಮಃ ।
ಓಂ ರಾಮಕಥಾಲೋಲಾಯ ನಮಃ ।
ಓಂ ಸೀತಾನ್ವೇಷಣಪಂಡಿತಾಯ ನಮಃ ।
ಓಂ ವಜ್ರದಂಷ್ಟ್ರಾಯ ನಮಃ ।
ಓಂ ವಜ್ರನಖಾಯ ನಮಃ ॥೧೦೦॥
ಓಂ ರುದ್ರವೀರ್ಯಸಮುದ್ಭವಾಯ ನಮಃ ।
ಓಂ ಇಂದ್ರಜಿತ್ಪ್ರ ಹಿತಾಮೋಘ ಬ್ರಹ್ಮಾಸ್ತ್ರ
ವಿನಿವಾರಕಾಯ ನಮಃ ।
ಓಂ ಪಾರ್ಥಧ್ವಜಾಗ್ರಸಂವಾಸಿನೇ ನಮಃ ।
ಓಂ ಶರಪಂಜರ ಭೇಧಕಾಯ ನಮ।
ಓಂ ದಶಬಾಹವೇ ನಮಃ ।
ಓಂ ಲೋಕಪೂಜ್ಯಾಯ ನಮಃ ।
ಓಂ ಜಾಂಬವತ್ಪ್ರೀತಿವರ್ಧನಾಯ ನಮಃ ।
ಓಂ ಸೀತಾಸಮೇತ ಶ್ರೀರಾಮ ಪಾದ ಸೇವಾ
ದುರಂಧರಾಯ ನಮಃ ।

॥ ಶ್ರೀ ಆಂಜನೇಯಾಷ್ಟೋತ್ತರ ಸಂಪೂರ್ಣಂ ॥

SHRI GURU CHARITRA

CC-O. In Public Domain. Digitized by eGangotri

Sri Vidyabharati Book Centre, Sirsi (U.K.)

SHRI MAHAALASAA NAARAAYANI DEVI KSHETRA : HARIKHANDIGE

OUR PUBLICATIONS

ಶ್ರೀ ಮಹಾಲಸಾ ನಾರಾಯಣೀ ದೇವಿ ಕ್ಷೇತ್ರದ ಪ್ರಕಟಣೆಗಳು

CC-O. In Public Domain. Digitized by eGangotri

THE CHARITHRA OF GODDESS SHRI MAHAALASAA NAARAAYANI
(Kannada, Marathi, English)

SRI MAHAALASAA NAARAAYANI SAHASRA NAAMAAVALI
(with meaning) (Kannada, Marathi, English)

SRI MAHAALASAA NAARAYANI POOJA VIDHAN (Kannada, Marathi)

SRI GURUCHARITHRE (Kannada, English, Marathi, Telugu)

SRI LAGHU GURUCHARITHRE (Kannada)

INAM SHRI DATTAPEETHA

ಶ್ರೀ ಮಹಾಲಸಾ ನಾರಾಯಣೀ ದೇವಿಯ ಚರಿತ್ರೆ
(ಕನ್ನಡ, ಇಂಗ್ಲೀಷ್, ಮರಾಠಿ)

ಶ್ರೀ ಮಹಾಲಸಾ ನಾರಾಯಣೀ ದೇವಿಯ ಸಹಸ್ರನಾಮಾವಳಿ
(ಅರ್ಥ ಸಹಿತ, ಕನ್ನಡ, ಇಂಗ್ಲೀಷ್, ಮರಾಠಿ)

ಶ್ರೀ ಮಹಾಲಸಾ ನಾರಾಯಣೀ ದೇವಿ ಪೂಜಾ ವಿಧಾನ
(ಕನ್ನಡ, ಮರಾಠಿ)

ಶ್ರೀ ಗುರುಚರಿತ್ರೆ (ಕನ್ನಡ, ಇಂಗ್ಲೀಷ್, ಮರಾಠಿ, ತೆಲುಗು)

ಶ್ರೀ ಲಘುಗುರುಚರಿತ್ರೆ (ಕನ್ನಡ)

ಇನಾಂ ಶ್ರೀ ದತ್ತಪೀಠ, ಚಿಕ್ಕಮಗಳೂರು

₹ 15/-

Our publications will be sent on intimation

Sri Vidyabharathi Book Centre, Sringeri

ಆಸಕ್ತರಿಗೆ ನಮ್ಮ ಪ್ರಕಟಣೆಗಳನ್ನು ಕಳುಹಿಸುವ ವ್ಯವಸ್ಥೆಯನ್ನು ಮಾಡಲಾಗುವುದು.